ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ: ಜಿಎಲ್5/03(2)/2023-24

ದಿನಾಂಕ: 02.07.2024

**ಸು ತ್ತೋ ಲೆ**

ವಿಷಯ: ದಿನಾಂಕ 08.07.2024 ರಂದು ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸುವ ಬಗ್ಗೆ.

* * * * *

ಡಾ॥ ಬಿ.ಆರ್. ಅಂಬೇಡ್ಕರ್ ಯುವಕ ಸಂಘಗಳ ಒಕ್ಕೂಟ, ನಂಜನಗೂಡು ತಾಲ್ಲೂಕು ಇವರ ಸಂಯುಕ್ತಾಶ್ರಯದಲ್ಲಿ ಬಾಬಾ ಸಾಹೇಬ್ ಡಾ॥ ಬಿ.ಆರ್. ಅಂಬೇಡ್ಕರ್‌ರವರ 133ನೇ ಜಯಂತಿಯ ಅಂಗವಾಗಿ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ **"ಯುವ ಸಮುದಾಯದಿಂದ ಮಾತ್ರ ಜಗತ್ತಿನ ಸಮಾಜ ಪರಿವರ್ತನೆ ಸಾಧ್ಯ"** ಎಂಬ ವಿಷಯದ ಬಗ್ಗೆ ದಿನಾಂಕ 08.07.2024 ರಂದು ಬೆಳಗ್ಗೆ 9.00ಗಂಟೆಗೆ ಅಂಬೇಡ್ಕರ್ ಭವನ ನಂಜನಗೂಡು ಇಲ್ಲಿ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿದೆ.

**ಚರ್ಚಾ ಸ್ಪರ್ಧೆ ಷರತ್ತುಗಳು:**

1. ಸ್ಪರ್ಧಿಗಳು ಮೈಸೂರು ಜಿಲ್ಲೆಯ ಯಾವುದಾದರೂ ಸರ್ಕಾರಿ ಹಾಗೂ ಅನುದಾನಿತ ಮತ್ತು ಖಾಸಗಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.
2. ಭಾಗವಹಿಸಲು ಆಸಕ್ತಿ ಇರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಾವು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಗುರುತಿನ ಚೀಟಿಯನ್ನು ನೀಡುವುದು.
3. ಆಸಕ್ತ ವಿದ್ಯಾರ್ಥಿಗಳು ತಮ್ಮ ಹೆಸರನ್ನು 05.07.2024ರ ಸಂಜೆ 5.00 ಒಳಗೆ ನೊಂದಾವಣಿ ಮಾಡಿಕೊಳ್ಳಬೇಕು.
4. ಭಾಗವಹಿಸುವ ಸ್ಪರ್ಧಿಗಳು ವಿಷಯದ ಪರ ಹಾಗೂ ವಿರುದ್ಧ ಎರಡರ ಬಗ್ಗೆಯೂ ಮಾಹಿತಿಯನ್ನು ಹೊಂದಿರಬೇಕು(ತಾವು ಮಾತನಾಡುವ ವಿಷಯದ ಬಗ್ಗೆ ಸ್ಥಳದಲ್ಲೇ ಚೀಟಿ ಎತ್ತುವ ಮೂಲಕ ನಿರ್ಧರಿಸಲಾಗುವುದು)
5. ಸ್ಪರ್ಧಿಗಳಿಗೆ ತಮ್ಮ ವಿಷಯದ ಬಗ್ಗೆ ಮಾತನಾಡಲು ನಾಲ್ಕರಿಂದ ಐದು ನಿಮಿಷ ಮಾತ್ರ ಅವಕಾಶವಿರುತ್ತದೆ.
6. ಸ್ಪರ್ಧಿಗಳು ತಮ್ಮ ಚರ್ಚೆಯ ವಿಯಷಕ್ಕೆ ಪೂರಕವಾಗಿ ರಾಷ್ಟ್ರ ನಾಯಕರು, ಚಿಂತಕರು, ಸಾಹಿತಿಗಳು, ವಚನಾಕಾರರು, ಸಮಾಜ ಸುಧಾರಕರು ಹಾಗೂ ಗಾದೆಗಳ ಹೇಳಿಕೆಗಳನ್ನು ಬಳಸಿಕೊಳ್ಳಬಹುದು.
7. ಸ್ಪರ್ಧಿಗಳು ವಿಷಯದ ಪರ ಮತ್ತು ವಿರೋಧವಾಗಿ ಮಾತನಾಡುವ ಸಂಧರ್ಭದಲ್ಲಿ ತಮ್ಮ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಬೇಕು. ಮತ್ತು ಯಾವುದೇ ವ್ಯಕ್ತಿ, ಸಮುದಾಯ, ಸಮಾಜ ಹಾಗೂ ಜಾತಿ ಧರ್ಮದ ಬಗ್ಗೆ ಅವಹೇಳನವಾಗುವಂತ ಪದಗಳನ್ನು ಬಳಸಬಾರದು.
8. ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.

**ವಿಶೇಷ ಸೂಚನೆ:** ಹೆಚ್ಚಿನ ಮಾಹಿತಿಗಾಗಿ **ದೂರವಾಣಿ ಸಂಖ್ಯೆ:** 9901222673, 9480557170, 9620647007 ಗಳನ್ನು ಸಂಪರ್ಕಿಸುವುದು.

ಈ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವ

**ಇವರಿಗೆ:**

1. ವಿಶ್ವವಿದ್ಯಾನಿಲಯದ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ಪ್ರಾಂಶುಪಾಲರು, ಮೈಸೂರು ವಿಶ್ವವಿದ್ಯನಿಲಯ ಮೈಸೂರು.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು.
3. ನಿರ್ದೇಶಕರು, ಐ.ಸಿ.ಡಿ, ಗಣಕ ವಿಜ್ಞಾನ, ಮಾನಸಗಂಗೋತ್ರಿ, ಮೈಸೂರು -ಸದರಿ ಪತ್ರವನ್ನು ವೆಬ್‌ಸೆಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.

**ವಿದ್ಯಾರ್ಥಿಗಳು ಭಾಗವಹಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.**

ಪ್ರತಿ:

1. ಜಿಲ್ಲಾ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ರಿ), ಚುಂಚನಹಳ್ಳಿ ಗ್ರಾಮ ಮತ್ತು ಅಂಚೆ, ತಗಡೂರು ಮಾರ್ಗ ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ-571119.
2. ಮಾನ್ಯ ಕುಲಪತಿ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕಛೇರಿ ಪ್ರತಿ.